ಸದನವು 1 ಗಂಟೆ 37 ನಿಮಿಷಕ್ಕೆ ಮುಕ್ತಾಯವಾಗಿ 2 ಗಂಟೆ 40 ನಿಮಿಷದವರೆಗೆ ಮುಂದೂಡಲಾಯಿತು.

ಸದನವು ಮತ್ತೆ 3 ಗಂಟೆಗೆ ಸಮಾವೇಶಗೊಂಡಿತು.

(ಉಪಾಧ್ಯಕ್ಷರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ಉಪಾಧ್ಯಕ್ಷರು : ಶ್ರೀಯುತ ವಿಕಾಂತಯ್ಯನವರೇ ಪ್ರಾರಂಭ ಮಾಡುತ್ತೀರಾ?

ಶ್ರೀ ಎಚ್. ವಿಕಾಂತಯ್ಯ : ಕೋರಂ ಇಲ್ಲ. ಇದು ಲೆಜಿಸ್ಲೇಟೀವ್ ಬಿಸಿನೆಸ್. ಬೇರೆ ಕಾರ್ಯಕ್ರಮ ಇದ್ದರೆ ಕಾರ್ಯಕಲಾಪ ಪಟ್ಟಿಯಲ್ಲಿ ಅದು ಬೇರೆ ಪ್ರಶ್ನೆ ಇದು ಲೆಜಿಸ್ಲೇಟೀವ್ ಬಿಸಿನೆಸ್ ಆದ್ದರಿಂದ.....

ಉಪಾಧ್ಯಕ್ಷರು : ಶುರು ಮಾಡಿ. ಸದಸ್ಯರುಗಳು ಬರಬಹುದು.

ಶ್ರೀ ಎಚ್. ವಿಕಾಂತಯ್ಯ : ಕೋರಂ ಇಲ್ಲದೆ ಶುರು ಮಾಡುವ ಪ್ರಶ್ನೆ ಇಲ್ಲ. ಅವರು ಊಟ ಮಾಡಿ ಬಂದಮೇಲೆ ಸಭೆ ಪ್ರಾರಂಭ ಮಾಡೋಣ.

SRI D.B.CHANDRE GOWDA : This is a very good point of order. ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ the Government is very anxious to pass the Bill., The members should also show that anxiety on the Floor of the House and the business of the House cannot be taken for a ride. That is one of the reasons why we insist for the quorum the chair may adjourn the House.

ಉಪಾಧ್ಯಕ್ಷರು : ಈಗ ನಿಮಗೆ ಗೊತ್ತಿದೆ, ಮಧ್ಯಾಹ್ನದ ಮೇಲೆ ನಾವು ಶುರು ಮಾಡುತ್ತೇವೆ. ಆಮೇಲೆ ನಮ್ಮ ಸದಸ್ಯರು ಒಂದೇ ಬರುತ್ತಾರೆ. ಮುಂದುವರೆಸುತ್ತೇವೆ.

ಶ್ರೀ ಹೆಚ್. ವಿಕಾಂತಯ್ಯ : ನಿಯಮಾವಳಿಯ ಪ್ರಕಾರ ಸಭೆ ನಡೆಸದೆ ಈ ರೀತಿಯ ನಡೆಸುವುದಾದರೆ ನಮ್ಮ ಆಕ್ಷೇಪಣೆ ಇದೆ. ಇದಕ್ಕೆ ತಮ್ಮ ರೂಲಿಂಗ್ ಬೇಕು.

ಉಪಾಧ್ಯಕ್ಷರು : ಚೀಫ್ ವಿಫ್ ಅವರು ಏನು ಹೇಳುತ್ತಾರೆ?

(ಬಿಲ್ ಹಾಕಿದ 2 ನಿಮಿಷಗಳ ನಂತರ ಕೋರಂ ಆಯಿತು ಮತ್ತು ಸಭೆ ಪ್ರಾರಂಭವಾಯಿತು)

ಉಪಾಧ್ಯಕ್ಷರು : ಈಗ ಪ್ರಾರಂಭ ಮಾಡಿ.

ಶ್ರೀ ಹೆಚ್. ವಿಕಾಂತಯ್ಯ: ಸನ್ಮಾನ್ಯ ಉಪಾಧ್ಯಕ್ಷಿಣಿಯರೆ.....

ಶ್ರೀ ಡಿ.ಬಿ. ಚಂದ್ರೇಗೌಡ : ಇವತ್ತು ಬಹಳ ಮುಖ್ಯವಾದಂಥ ಪ್ರಸ್ತಾಪ ಇದೆ. ಆಯವ್ಯಯದ ಮೇಲಿನ ಚರ್ಚೆ ನಡೆಯಬೇಕು ನಮ್ಮ ಸದನದ ಸಲಹಾ ಸಮಿತಿಯ ನಿರ್ಧಾರದಂತೆ ನಾಳೆ ಸಭೆ ಮುಗಿಯುತ್ತದೆ. ವಿತ್ತೀಯ ಕಾರ್ಯಕಲಾಪದ ಬಗ್ಗೆ ಚರ್ಚೆಯೇ ಮಾಡುವುದಿಲ್ಲ ಎಂದು ಸರ್ಕಾರ ತೀರ್ಮಾನಕ್ಕೆ ಬಂದಿದೆ ಆ ಮಾತು ಬೇರೆ.

ಉಪಾಧ್ಯಕ್ಷರು : ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಈ ವಿಷಯವನ್ನು.....

ಶ್ರೀ ಡಿ.ಬಿ. ಚಂದ್ರೇಗೌಡ: ನಿನ್ನೆಗೆ ಚರ್ಚೆ ಮುಗಿಯಬೇಕಾಗಿತ್ತು. ನಾಳೆ ಸಭೆ ಮುಂದುವರೆಯುತ್ತದೆ. ಬಜೆಟ್ ಚರ್ಚೆ ಈ ಶಾಸನಸಭೆಯಲ್ಲಿ ಆಗಕೂಡದು ಎಂದು ಏನಾದರೂ ಸರ್ಕಾರ ತೀರ್ಮಾನ ಮಾಡಿದೆಯೇ? ಅಥವಾ ಹಾಗೆ ಆಗಬೇಕು ಎಂದು ಇದ್ದರೆ ನಾವೇನೂ ಮಾಡುವುದಕ್ಕಾಗುವುದಿಲ್ಲ. ನಿಯಮಾವಳಿಯಂತೆ ನಿರ್ಣಯ ಮಾಡುವುದು ಒಂದು. ಇಲ್ಲಿ ಹೊಸ ಹೊಸ ವಿಚಾರಗಳನ್ನು ಇಲ್ಲಿ ಪ್ರಸ್ತಾಪ ಮಾಡಿ

ಯಾವುದಕ್ಕೆ ಪ್ರಾಮುಖ್ಯತೆ ಸಿಗಬೇಕೋ ಅದಕ್ಕೆ ಸಿಗದೇ ಇರುವುದು ಆಗುತ್ತಿದೆ. ಬಹುಮುಖ್ಯವಾಗಿ ದೇಶದ ಜನರ ಆಗುಹೋಗುಗಳ ಬಗ್ಗೆ ಆಯವ್ಯಯ ಪತ್ರ ಮಂಡನೆ ಮಾಡಿದ್ದಾರೆ. ಇದರ ಚರ್ಚೆಗೆ ನಮಗೆ ಅವಕಾಶ ಸಿಗುತ್ತಲೇ ಇಲ್ಲ. ಬೇರೆಯದನ್ನು ತರಬಾರದು ಎಂದು ನನ್ನ ಉದ್ದೇಶ ಅಲ್ಲ. ಪ್ರಿಯಾರಿಟಿ ಯಾವುದಕ್ಕೆ ಇರಬೇಕು ಎಂದು ಸರ್ಕಾರ ನಿರ್ಧಾರ ಮಾಡಬೇಕು. ಒಂದು ಕಡೆ ಬಿಸಿನೆಸ್ ಅಡ್ವೈಸರಿ ಕಮಿಟಿ ತೀರ್ಮಾನಕ್ಕೆ ಇಲ್ಲ, ಮತ್ತೊಂದು ಕಡೆ ಕರ್ನಾಟಕ ರಾಜ್ಯದ ಜನರ ಭವಿಷ್ಯದ ಮೇಲೆ ನಾವು ಚೆಲ್ಲಾಟ ಆಡುತ್ತಿದ್ದೇವೆ. ಆದ್ದರಿಂದ ನನ್ನ ಪ್ರಾರ್ಥನೆ ಎಂದರೆ, ಬಿ.ಎ.ಸಿ. ಪ್ರಕಾರ ನಾವು ವಿತ್ತೀಯ ಕಾರ್ಯಕಲಾಪಗಳನ್ನು ಮೊದಲು ತೆಗೆದುಕೊಳ್ಳೋಣ. ಜನರ ಕೆಲಸವನ್ನು ಮೊದಲು ಮಾಡೋಣ. ಆಮೇಲೆ ಉಳಿದ ವಿಚಾರವನ್ನು ತೆಗೆದುಕೊಳ್ಳಬಹುದು ಎಂದು ನಾನು ತಮಗೆ ಸಲಹೆ ಕೊಡುತ್ತಿದ್ದೇನೆ.

ಶ್ರೀ ಬಿ. ಬಸವಲಿಂಗಪ್ಪ (ಗ್ರಾಮೀಣ ಅಭಿವೃದ್ಧಿ ಸಚಿವರು): ಮಾನ್ಯ ವಿರೋಧ ಪಕ್ಷದ ನಾಯಕರು ಅವರ ಅಭಿಪ್ರಾಯವನ್ನು ಹೇಳಿದ್ದಾರೆ. ನನ್ನ ಅಭಿಪ್ರಾಯ ಏನೆಂದರೆ, ನಾವು ಮಧ್ಯಾಹ್ನ ಊಟಕ್ಕೋಸ್ಕರ ಬಿಡುತ್ತಿದ್ದೇವಲ್ಲಾ ಅದನ್ನು ನಾವು ಇದನ್ನೆಲ್ಲಾ ಮುಗಿಸುವವರೆಗೆ ಬಂದ್ ಮಾಡಬೇಕು, ಊಟಕ್ಕೆ ಬಿಟ್ಟಾಗ ಊಟ ಮಾಡುವುದಕ್ಕೆ ಹೋದವರು ಮಲಗುತ್ತಾರೆಂದು ಕಾಣುತ್ತದೆ. ನಿಮ್ಮ ಕಡೆ ಇಬ್ಬರಿದ್ದೀರಿ. ನಮ್ಮ ಕಡೆ ಎಷ್ಟು ಇರಬೇಕೋ ಅಷ್ಟು ಜನರಿದ್ದಾರೆ. ಇದಕ್ಕೆ ಔಷಧಿ ಕಂಡುಹಿಡಿಯಬೇಕೇ ಹೊರತು ಕಾನೂನು ಪ್ರಕಾರ ತಿರುವು ಕೊಡುವುದಕ್ಕಾಗುವುದಿಲ್ಲ. ಅದಕ್ಕೆ ನನ್ನ ಸಲಹೆ ಏನೆಂದರೆ ಕೋರಂ ಇಲ್ಲದೇ ಹೋದರೆ ಒಂದು ಅರ್ಧ ಗಂಟೆ ಮುಂದೆ ಹೋಗುವುದು ಒಳ್ಳೆಯದೆಂದು ನಾನು ಹೇಳುತ್ತೇನೆ.

ಉಪಾಧ್ಯಕ್ಷರು : ಕೋರಂ ಇದೆ.

ಶ್ರೀ ಬಿ. ಬಸವಲಿಂಗಪ್ಪ : ಇವತ್ತು ಅಜೆಂಡಾ ಪ್ರಕಾರ ಕೆಲಸ ಮಾಡಬೇಕಾಗುತ್ತದೆ. ಇಂದು 4 ಗಂಟೆಗೆ ಬಿಸಿನೆಸ್ ಅಡ್ವೈಸರಿ ಕಮಿಟಿ ಸೇರುತ್ತದೆ. ಅಲ್ಲಿ ಯಾವ ರೀತಿ ತೀರ್ಮಾನ ತೆಗೆದುಕೊಳ್ಳಬೇಕೋ ಆ ರೀತಿ ತೆಗೆದುಕೊಳ್ಳೋಣ. ಮುಂದೆ ಹೋಗಬೇಕೇ ಬೇಡವೇ ಎನ್ನುವ ಬಗ್ಗೆ ವಿಚಾರ ಮಾಡಿ ತೀರ್ಮಾನ ಮಾಡೋಣ. ಆ ತೀರ್ಮಾನ ಮಾಡುವ ಮುಂಚೆ ಏನು ತಮ್ಮ ಮುಂದೆ ಅಜೆಂಡಾ ಇದೆ ಅದರ ಪ್ರಕಾರ ಮಾತನಾಡುವವರಿದ್ದರೆ ಮಾತನಾಡಲಿ ನನಗೆ ಬಹಳ ಸಂತೋಷ.

ಉಪಾಧ್ಯಕ್ಷರು : ಈಗ ಅಜೆಂಡಾ ಪ್ರಕಾರ ಹೋಗೋಣ.

ಶ್ರೀ ಡಿ.ಬಿ. ಚಂದ್ರೇಗೌಡ: ಒಟ್ಟಿನಲ್ಲಿ ಈ ಸರ್ಕಾರದ ಪ್ರಿಯಾರಿಟಿ ಏನೆಂದು ಗೊತ್ತಾಯಿತು.

ವಿಧೇಯಕದ ಪರ್ಯಾಲೋಚನೆ ಮತ್ತು ಅಂಗೀಕಾರ

ಕರ್ನಾಟಕ ಜಿಲ್ಲಾಪರಿಷತ್ತುಗಳು, ತಾಲೂಕು ಪಂಚಾಯಿತಿ ಸಮಿತಿಗಳು ಮಂಡಲ ಪಂಚಾಯಿತಿಗಳು ಮತ್ತು ನ್ಯಾಯ ಪಂಚಾಯಿತಿಗಳು (ತಿದ್ದುಪಡಿ) ವಿಧೇಯಕ 1991 ಮತ್ತು ಈ ಬಗ್ಗೆ ಹೊರಡಿಸಿರುವ ಅಧಾದೇಶವನ್ನು ತಿರಸ್ಕರಿಸಬೇಕೆಂದು ಕೋರಿರುವ ನಿರ್ಣಯದ ಕುರಿತು ಚರ್ಚೆ.

ಶ್ರೀ ಹೆಚ್. ಏಕಾಂತಯ್ಯ (ಚಿತ್ರದುರ್ಗ): ಸನ್ಮಾನ್ಯ ಉಪಾಧ್ಯಕ್ಷೆಯರೇ ಈಗಾಗಲೇ ತಾವು ಅಂಗೀಕರಿಸಲ್ಪಟ್ಟ ನಿರ್ಣಯವನ್ನು ಈ ಸಭೆಯ ಮುಂದೆ ಮಂಡಿಸಿದ್ದೇನೆ. ಆ ಮಂಡಿಸಿದಂಥ ನಿರ್ಣಯ ಈ ರೀತಿ ಇದೆ. 1983ನೇ ಇಸವಿಯ ಕರ್ನಾಟಕ ಜಿಲ್ಲಾಪರಿಷತ್ತುಗಳು ತಾಲ್ಲೂಕು ಪಂಚಾಯಿತಿ ಸಮಿತಿಗಳು, ಮಂಡಲ ಪಂಚಾಯಿತಿಗಳು ಮತ್ತು ನ್ಯಾಯ ಪಂಚಾಯಿತಿಗಳು ಅಧಿನಿಯಮದ 167ನೇ ಪ್ರಕರಣದ (3)ನೇ